All India Radio: Bangalore
National Bulletin In Kannada
05.02.2025  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ದೆಹಲಿ ವಿಧಾನಸಭಾ ಚುನಾವಣೆ ; ಮತದಾನ ಬಹುತೇಕ ಶಾಂತಿಯುತ
- ೧೦೪ ಮಂದಿ ಅಕ್ರಮ ವಲಸಿಗ ಭಾರತೀಯರು ಅಮೆರಿಕದಿಂದ ಭಾರತಕ್ಕೆ ಗಡಿಪಾರು
- ಮಹಾಕುಂಭಮೇಳ; ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪವಿತ್ರ ಸ್ನಾನ
- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷರೊಂದಿಗೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮಾತುಕತೆ
- ರಾಷ್ಟ್ರೀಯ ಕ್ರೀಡಾಕೂಟ; ಮಹಿಳೆಯರ ೧೦ ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಹರಿಯಾಣದ ಸುರುಚಿಗೆ ಚಿನ್ನ

<><><><>

ದೆಹಲಿ ವಿಧಾನಸಭೆಯ ೭೦ ಕ್ಷೇತ್ರಗಳಿಗೆ ಇಂದು ಶಾಂತಿಯುತವಾಗಿ ಮತದಾನ ನಡೆಯಿತು. ಸಂಜೆ ೫ ಗಂಟೆಯವರೆಗಿನ ವರದಿ ಪ್ರಕಾರ, ಶೇಕಡ ೫೮ ರಷ್ಟು ಮತದಾನವಾಗಿತ್ತು. ಈಶಾನ್ಯ ದೆಹಲಿಯಲ್ಲಿ ಅತಿ ಹೆಚ್ಚು ಮತದಾನವಾಗಿದ್ದು, ಶೇಕಡ ೬೩.೮೩ ರಷ್ಟು ಮತದಾನವಾಗಿದೆ. ಶಹದಾರ ಜಿಲ್ಲೆಯಲ್ಲಿ ಶೇಕಡ ೬೧.೩೫, ಉತ್ತರ ದೆಹಲಿಯಲ್ಲಿ ಶೇಕಡ ೫೭.೨೪, ವಾಯವ್ಯ ದೆಹಲಿಯಲ್ಲಿ ಶೇಕಡ ೫೮.೦೮, ದಕ್ಷಿಣ ದೆಹಲಿಯಲ್ಲಿ ಶೇಕಡ ೫೫.೭೨ ಮತ್ತು ನವದೆಹಲಿಯಲ್ಲಿ ಶೇಕಡ ೫೪.೩೭ ರಷ್ಟು ಮತದಾನ ದಾಖಲಾಗಿದೆ. ಇಂದು ಬೆಳಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಕೇಂದ್ರ ಸಚಿವರಾದ ಡಾ.ಎಸ್.ಜೈಶಂಕರ್, ಹರ್ದೀಪ್ ಸಿಂಗ್ ಪುರಿ, ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ, ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸೆಕ್ಸೆನಾ, ದೆಹಲಿ ಮುಖ್ಯಮಂತ್ರಿ ಅತಿಶಿ ಸೇರಿದಂತೆ ಹಲವು ಗಣ್ಯರು ತಮ್ಮ ಮತ ಚಲಾಯಿಸಿದ್ದಾರೆ. ಮತ ಚಲಾಯಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಮತದಾನ ಎಲ್ಲರ ಮೂಲಭೂತ ಹಕ್ಕಾಗಿದೆ. ಇದು ಪ್ರಜಾಪ್ರಭುತ್ವದ ಅಡಿಪಾಯವಾಗಿದೆ

ಎಂದರು. ಇದೇ ವೇಳೆ ಅವರು, ಸುಗಮ ಮತದಾನಕ್ಕಾಗಿ ಚುನಾವಣಾ ಆಯೋಗ ಮಾಡಿರುವ ವ್ಯವಸ್ಥೆಯನ್ನು ಶ್ಲಾಘಿಸಿದರು.

ಧ್ವನಿ : ಜಗದೀಪ್ ಧನ್‌ಕರ್ (20 ಸೆಕೆಂಡ್ಸ್)

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ ಅತಿಶಿ, ಬಿಜೆಪಿ ವಿಜೇಂದರ್ ಗುಪ್ತಾ, ಪ್ರವೇಶ್ ವರ್ಮಾ, ರಮೇಶ್ ಬಿದೂರಿ, ಕೈಲಾಶ್ ಗೆಹ್ಲೋಟ್, ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್, ಹರುನ್ ಯೂಸೂಫ್ ಮತ್ತು ಅಲ್ಕಾಲಂಬಾ ಕಣದಲ್ಲಿರುವ ಪ್ರಮುಖರಾಗಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆ ಜೊತೆಗೆ ಇಂದು ತಮಿಳುನಾಡಿನ ಇರೋಡ್ ಪೂರ್ವ ಕ್ಷೇತ್ರ ಮತ್ತು ಉತ್ತರ ಪ್ರದೇಶದ ಮಿಲ್ಕಿಪುರ್ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಿತು.

<><><><>

೧೦೪ ಮಂದಿ ಅಕ್ರಮ ವಲಸಿಗ ಭಾರತೀಯರನ್ನು ಹೊತ್ತ ಅಮೆರಿಕದ ವಿಮಾನ ಇಂದು ಮಧ್ಯಾಹ್ನ ಪಂಜಾಬ್‌ನ ಅಮೃತ್‌ಸರದ ಶ್ರೀಗುರುದಾಸ್ ರಾಮ್‌ದಾಸ್ ಜಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಮೂಲಗಳ ಪ್ರಕಾರ, ಅಮೆರಿಕದಿಂದ ಗಡಿಪಾರಾದವರಲ್ಲಿ ೩೦ ಮಂದಿ ಪಂಜಾಬ್‌ನವರಾಗಿದ್ದು, ಇತರರು ಚಂಡೀಗಢ, ಹರಿಯಾಣ, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದವರಾಗಿದ್ದಾರೆ. ಗಡಿಪಾರಾದವರ ತಪಾಸಣೆ ಮತ್ತು ಅವರ ಹಿನ್ನೆಲೆಯನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್, ಅಧಿಕಾರ ವಹಿಸಿಕೊಂಡ ನಂತರ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗುತ್ತಿದೆ. ಅಕ್ರಮ ವಲಸಿಗ ಭಾರತೀಯರ ಗಡಿಪಾರು ಇದರ ಭಾಗವಾಗಿದೆ.

<><><><>

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಂದು ಭೇಟಿ ನೀಡಿದರು. ದೋಣಿಯ ಮೂಲಕ ತ್ರಿವೇಣಿ ಸಂಗಮಕ್ಕೆ ತೆರಳಿ ಅಮೃತ ಸ್ನಾನ ಮಾಡಿದರು. ಈ ವೇಳೆ ಅವರು, ಸೂರ್ಯ ದೇವರಿಗೆ ಅರ್ಘ್ಯ ಅರ್ಪಿಸಿದರು. ನಂತರ ಗಂಗಾ ಪೂಜೆ ನೆರವೇರಿಸಿದರು. ಅವರೊಂದಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತರಿದ್ದರು. ಜನವರಿ ೧೩ ರಂದು ಆರಂಭವಾಗಿರುವ ಮಹಾಕುಂಭಮೇಳದಲ್ಲಿ ಈವರೆಗೆ ೩೮ ಕೋಟಿಗೂ ಅಧಿಕ ಭಕ್ತಾದಿಗಳು, ತ್ರಿವೇಣಿ ಸಂಗಮದಲ್ಲಿ ಅಮೃತ ಸ್ನಾನ ಮಾಡಿದ್ದಾರೆ.

<><><><>

ನವದೆಹಲಿಯಲ್ಲಿಂದು ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮಾನ್ ಯಾಂಗ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಈ ಕುರಿತು ಮಾಹಿತಿ ನೀಡಿದ ಡಾ. ಎಸ್. ಜೈಶಂಕರ್, ಸುಧಾರಿತ ಬಹುಪಕ್ಷೀಯತೆಯ ಅಗತ್ಯ ಸೇರಿದಂತೆ ವಿಶ್ವಸಂಸ್ಥೆಯ ಕಾರ್ಯಸೂಚಿಯಲ್ಲಿರುವ ವಿವಿಧ ವಿಷಯಗಳ ಕುರಿತು ಭೇಟಿ ವೇಳೆ ಚರ್ಚಿಸಲಾಯಿತು. ಪ್ರಾದೇಶಿಕ, ಜಾಗತಿಕ ಮತ್ತು ಅಭಿವೃದ್ಧಿ ವಿಷಯಗಳ ಬಗ್ಗೆಯೂ ಪರಸ್ಪರ ವಿನಿಮಯ ಮಾಡಿಕೊಳ್ಳಲಾಯಿತು ಎಂದು ತಿಳಿಸಿದ್ದಾರೆ.

<><><>

ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ಓಪನ್ ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಈ ಕುರಿತು ಮಾಹಿತಿ ನೀಡಿದ ಸಚಿವ ಅಶ್ವಿನಿ ವೈಷ್ಣವ್, ಜಿಪಿಯುಗಳು, ಮಾದರಿಗಳು ಮತ್ತು ಅಪ್ಲಿಕೇಷನ್‌ಗಳ ಸಂಪೂರ್ಣ ಎಐ ಸ್ಟ್ಯಾಕ್ ಅನ್ನು ರಚಿಸುವ ಕುರಿತು ಓಪನ್ ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಅವರೊಂದಿಗೆ ಚರ್ಚಿಸಲಾಯಿತು ಎಂದು ತಿಳಿಸಿದ್ದಾರೆ.

<><><>

ಸತತ ೨ನೇ ದಿನವಾದ ಇಂದು ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಜಮ್ಮು ಮತ್ತು ಕಾಶ್ಮೀರಕ್ಕ ಸಂಬಂಧಿಸಿದಂತೆ ಭದ್ರತಾ ಪರಿಶೀಲನಾ ಸಭೆ ನಡೆಸಿದರು. ಕೇಂದ್ರ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್, ಭಾರತೀಯ ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಎಲ್ಲ ಭದ್ರತಾ ಸಂಸ್ಥೆಗಳು ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸುವಂತೆ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಸಂಘಟಿತ ರೀತಿಯಲ್ಲಿ ಕೆಲಸ ಮಾಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನಿರ್ದೇಶಿಸಿದರು.

<><><>

ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುವ ಜೊತೆಗೆ ವಿವೇಚನಾಯುಕ್ತ ಹಣಕಾಸಿನ ಸ್ಥಿತಿಯನ್ನು ನಿರ್ವಹಿಸುವ ಬಜೆಟ್‌ನ ಉದ್ದೇಶಗಳಿಗೆ ಅನುಗುಣವಾಗಿ, ಸುಮಾರು ಐದು ವರ್ಷಗಳಲ್ಲಿ ಮೊದಲ ಬಾರಿಗೆ ಭಾರತೀಯ ರಿಸರ್ವ್ ಬ್ಯಾಂಕ್-ಆರ್‌ಬಿಐ, ರೆಪೋ ದರವನ್ನು ೨೫ ಮೂಲ ಅಂಶಗಳಷ್ಟು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

<><><>

ಭಾರತದ ಐಎಲ್ ಮತ್ತು ಎಫ್‌ಎಸ್ ಇಂಧನ ಅಭಿವೃದ್ಧಿ ಕಂಪನಿಯ ಷೇರುಗಳನ್ನು ಖರೀದಿಸಲು ನೇಪಾಳ ವಿದ್ಯುತ್ ಪ್ರಾಧಿಕಾರಕ್ಕೆ ಅನುಮತಿ ನೀಡಲಾಗಿದೆ ಎಂದು ನೇಪಾಳದ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪೃಥ್ವಿಸುಬ್ಬ ಗುರುಂಗ್ ತಿಳಿಸಿದ್ದಾರೆ. ಸಂಪುಟ ಸಭೆಯ ನಿರ್ಧಾರಗಳನ್ನು ಮಾಧ್ಯಮಗಳೊಂದಿಗೆ ಹಂಚಿಕೊಂಡ ಅವರು,  ನೇಪಾಳ-ಭಾರತ ಗಡಿ ಮಾರ್ಗದಿಂದ ಭಾರತದ ಮುಜಫರ್‌ಪುರಕ್ಕೆ ಪ್ರಸರಣ ಮಾರ್ಗದ ಅಭಿವೃದ್ಧಿಗಾಗಿ ಐಎಲ್ ಮತ್ತು ಎಫ್‌ಎಸ್ ಕಂಪನಿಯ ೨೯ ಲಕ್ಷ ೭೩ ಸಾವಿರ ೧೬೩ ಯೂನಿಟ್ ಪ್ರವರ್ತಕ ಷೇರುಗಳನ್ನು ಖರೀದಿಸಲು ಎನ್‌ಇಎಗೆ ಅವಕಾಶ ನೀಡಲು ಸಂಪುಟ ಸಭೆ ನಿರ್ಧರಿಸಿದೆ.

<><><>

ಪೋರ್ಚುಗಲ್‌ನಲ್ಲಿ ಇಸ್ಮೈಲಿ ಮುಸ್ಲಿಮರ ಧಾರ್ಮಿಕ ನಾಯಕ ೪ನೇ ಅಘಾ ಖಾನ್ ಇಂದು ನಿಧನರಾಗಿದ್ದಾರೆ. ಅವರಿಗೆ ೮೮ ವರ್ಷ ವಯಸ್ಸಾಗಿತ್ತು. ತಮ್ಮ ೨೦ನೇ ವಯಸ್ಸಿನಲ್ಲಿ ಅವರು, ಇಮಾಮ್ ಆಗಿದ್ದರು. ಮುಸ್ಲಿಂ ಸಮುದಾಯಗಳ ಅಭಿವೃದ್ಧಿಗಾಗಿ ಅವರು, ಶ್ರಮಿಸಿದ್ದರು. ಅಘಾ ಖಾನ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ಸ್ವೀಡನ್‌ನ ಸ್ಟಾಕ್‌ಹೋಂ ಪಶ್ಚಿಮದಲ್ಲಿರುವ ಶಿಕ್ಷಣ ಕೇಂದ್ರದಲ್ಲಿ ನಿನ್ನೆ ನಡೆದ ಭೀಕರ ಗುಂಡಿನ ದಾಳಿಯಲ್ಲಿ, ಬಂದೂಕುದಾರಿ ಸೇರಿದಂತೆ ಕನಿಷ್ಠ ೧೦ ಜನ ಮೃತಪಟ್ಟಿದ್ದಾರೆ. ರಾಷ್ಟ್ರೀಯ ಪರೀಕ್ಷೆ ನಂತರ ನಿನ್ನೆ ಮಧ್ಯಾಹ್ನ ತಮ್ಮ ಮನೆಗಳಿಗೆ ತೆರಳಲು ವಿದ್ಯಾರ್ಥಿಗಳು ಸಿದ್ಧರಾಗಿದ್ದರು. ಈ ವೇಳೆ ಬಂದೂಕುದಾರಿಯೊಬ್ಬ ಗುಂಡಿನ ದಾಳಿ ನಡೆಸಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸರು ತನಿಖೆ ಆರಂಭಿಸಿದ್ದು, ಮೃತ ಬಂದೂಕುದಾರಿಯ ಕುರಿತು ಮಾಹಿತಿ ಕಲೆ ಹಾಕುತ್ತಿದ್ದಾರೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದು, ಮೃತರ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಸ್ಥಳೀಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

<><><>

ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ ೩೮ನೇ ರಾಷ್ಟ್ರೀಯ ಕ್ರೀಡಾಕೂಟದ ಮಹಿಳೆಯರ ೧೦ ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಹರಿಯಾಣದ ಸುರುಚಿ ಚಿನ್ನ ಮತ್ತು ಹರಿಯಾಣದ ಪಲಕ್ ಬೆಳ್ಳಿ ಹಾಗೂ ಪಂಜಾಬ್‌ನ ಸಿಮ್ರಾನ್‌ಪ್ರೀತ್ ಕೌರ್ ಕಂಚಿನ ಪದಕ ವಿಜೇತರಾಗಿದ್ದಾರೆ. ಪುರುಷರ ೫೦ ಮೀಟರ್ ರೈಫಲ್ ಫೈನಲ್ ಸ್ಪರ್ಧೆ ನಾಳೆ ನಡೆಯಲಿದೆ.

ಪುರುಷರ ಹಾಕಿ ಪಂದ್ಯಾವಳಿಯ ಗುಂಪು ಬಿ ವಿಭಾಗದಲ್ಲಿ ಉತ್ತರಾಖಂಡದ ವಿರುದ್ಧ ೮-೪ ಗೋಲುಗಳಿಂದ ಹರಿಯಾಣ ಗೆಲುವು ದಾಖಲಿಸಿದೆ. ಮಧ್ಯಪ್ರದೇಶ ತಂಡವನ್ನು ೧-೦ ಗೋಲುಗಳಿಂದ ಒಡಿಶಾ ಪರಾಭವಗೊಳಿಸಿದೆ. ಇದೇ ವೇಳೆ ತಮಿಳುನಾಡು ವಿರುದ್ಧ ೨-೧ ಗೋಲುಗಳಿಂದ ಮಹಾರಾಷ್ಟ್ರ ಗೆಲುವು ಸಾಧಿಸಿದೆ. ಪುರುಷರ ವಾಲಿಬಾಲ್ ಸ್ಪರ್ಧೆಯಲ್ಲಿ ಗೋವಾ ವಿರುದ್ಧ ೨-೦ ಅಂತರದಿಂದ ಗೆಲುವು ಸಾಧಿಸಿರುವ ತಮಿಳುನಾಡು ಫೈನಲ್ ಪ್ರವೇಶಿಸಿದೆ. ಇದಕ್ಕೂ ಮುನ್ನ ತೆಲಂಗಾಣ ವಿರುದ್ಧ ಗೆದ್ದ ಆಂಧ್ರಪ್ರದೇಶ ತಂಡ ಕೂಡ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮಹಿಳೆಯರ ಬೀಚ್ ವಾಲಿಬಾಲ್ ಸ್ಪರ್ಧೆಯಲ್ಲಿ ಪುದುಚೇರಿ ಮತ್ತು ತಮಿಳುನಾಡು ಫೈನಲ್ ಪ್ರವೇಶಿಸಿದೆ.

<><><><>

ಅರ್ಜೆಂಟೀನಾದಲ್ಲಿ ಇಂದು ನಡೆಯಲಿರುವ ರೊಸಾರಿಯೊ ಚಾಲೆಂಜರ್ ಟೆನಿಸ್‌ನ ಪುರುಷರ ಸಿಂಗಲ್ಸ್‌ನ ಪ್ರಿ-ಕ್ವಾರ್ಟರ್ ಫೈನಲ್‌ನಲ್ಲಿಂದು ಭಾರತದ ಸುಮಿತ್ ನಗಾಲ್, ಬೊಲಿವಿಯಾದ ಹ್ಯೂಗೋ ಡೆಲಿಯನ್ ಅವರನ್ನು ಎದುರಿಸಲಿದ್ದಾರೆ. ಇದಕ್ಕೂ ಮೊದಲು, ಅವರು, ರೆಂಜೊ ಒಲಿವೊ ವಿರುದ್ಧ ೫-೭, ೬-೧, ೬-೦ ಅಂತರದಲ್ಲಿ ಜಯ ಗಳಿಸಿ, ೧೬ ರ ಸುತ್ತಿಗೆ ಲಗ್ಗೆ ಇಟ್ಟರು.

<><><><>

ನಾಳೆಯಿಂದ ಪ್ರಾರಂಭವಾಗಲಿರುವ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಿನ ಮೂರು ಏಕದಿನ ಪಂದ್ಯಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣಾ ಮಂಡಳಿ- ಬಿಸಿಸಿಐ, ವರುಣ್ ಚಕ್ರವರ್ತಿ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ. ಇತ್ತೀಚಿಗೆ ರಾಜ್‌ಕೋಟ್‌ನಲ್ಲಿ ನಡೆದ ಪಂದ್ಯಾವಳಿಯಲ್ಲಿ ವರುಣ್, ೧೪ ವಿಕೆಟ್‌ಗಳನ್ನು ಪಡೆದು, ಅಮೋಘ ಪ್ರದರ್ಶನ ನೀಡಿದ್ದರು. ನಾಗ್ಪುರದಲ್ಲಿ ನಾಳೆ ನಡೆಯುವ ಮೊದಲ ಏಕದಿನ ಪಂದ್ಯ ಮಧ್ಯಾಹ್ನ ೧.೩೦ ಕ್ಕೆ ಆರಂಭವಾಗಲಿದೆ.

<>< > ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>